ಕರ್ನಾಟಕ ಸರ್ಕಾರ
ಕರ್ನಾಟಕ ಪರೀಕ್ಷಾ ಪ್ರಾಧಿಕಾರ
ಸಂಪಿಗೆ ರಸ್ತೆ, 18ನೇ ಅಡ್ಡರಸ್ತೆ, ಮಲ್ಲೇಶ್ವರಂ, ಬೆಂಗಳೂರು–560 012, ದೂರವಾಣಿ: 080–23 460 460 (5 ಲೈನ್‌ಗಳು)
ಫ್ಯಾಕ್ಸ್: 080–23461576 ಇ–ಮೇಲ್: keauthority-ka@nic.in ವೆಬ್‌ಸೈಟ್: http://kea.kar.nic.in

ಸಂಖ್ಯೆ: ಇಡಿ/ಕೆಇಎ/ಆಡಳಿತ/ಸಿ.ಆರ್.19/2020–21(ಕೆಕೆ) ದಿನಾಂಕ: 30–09–2021
ಸಂಖ್ಯೆ: ಇಡಿ/ಕೆಇಎ/ಆಡಳಿತ/ಸಿ.ಆರ್.19/2020–21(ಆರ್‌ಪಿಸಿ) ದಿನಾಂಕ: 30–09–2021

ಅಧಿಸೂಚನೆ

ಕರ್ನಾಟಕ ರಾಜ್ಯದಲ್ಲಿನ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಲ್ಲಿ ಖಾಲಿ ಇರುವ ಸಹಾಯಕ ಪ್ರಾಧ್ಯಾಪಕರ ಹುದ್ದೆಗಳ ನೇರ ನೇಮಕಾತಿ – ಮಿಕ್ಕುಳಿದ ವೃಂದ ಮತ್ತು ಕಲ್ಯಾಣ ಕರ್ನಾಟಕ ಪ್ರದೇಶ (ಸ್ಥಳೀಯ) ವೃಂದದ ಹುದ್ದೆಗಳೂ ಸೇರಿದಂತೆ

ಕರ್ನಾಟಕ ರಾಜ್ಯದಲ್ಲಿನ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳ ಸಹಾಯಕ ಪ್ರಾಧ್ಯಾಪಕರ ಹುದ್ದೆಗಳನ್ನು ಸ್ಪರ್ಧಾತ್ಮಕ ಪರೀಕ್ಷೆ ಮೂಲಕ ಭರ್ತಿ ಮಾಡಲು ಸರ್ಕಾರವು ತನ್ನ ಅಧಿಸೂಚನೆ ಸಂಖ್ಯೆ ಇಡಿ 257 ಡಿಸಿಇ 2019 (ಭಾ–3), ಬೆಂಗಳೂರು, ದಿನಾಂಕ 15–07–2021 ರಲ್ಲಿ ಕರ್ನಾಟಕ ಪರೀಕ್ಷಾ ಪ್ರಾಧಿಕಾರವನ್ನು ಆಯ್ಕೆ ಪ್ರಾಧಿಕಾರವನ್ನಾಗಿ ಅಧಿಸೂಚಿಸಲಾಗಿದೆ. "ಕರ್ನಾಟಕ ಶಿಕ್ಷಣ ಇಲಾಖಾ ಸೇವೆಗಳು (ಕಾಲೇಜು ಶಿಕ್ಷಣ ಇಲಾಖೆ) (ಸಹಾಯಕ ಪ್ರಾಧ್ಯಾಪಕರ ನೇಮಕಾತಿ) (ವಿಶೇಷ) ನಿಯಮಗಳು 2020" ಮತ್ತು ತಿದ್ದುಪಡಿ ಅಧಿಸೂಚನೆ ಸಂಖ್ಯೆ ಇಡಿ 257 ಡಿಸಿಇ 2019 (ಭಾ–3) ಬೆಂಗಳೂರು, ದಿನಾಂಕ 19–10–2020; ಸರ್ಕಾರದ ಅಧಿಸೂಚನೆ ಸಂಖ್ಯೆ ಇಡಿ 257 ಡಿಸಿಇ 2019 ದಿನಾಂಕ 26–08–2021 ಹಾಗು ಆಯುಕ್ತರು, ಕಾಲೇಜು ಶಿಕ್ಷಣ ಇಲಾಖೆ ಇವರ ಪತ್ರ ಸಂಖ್ಯೆ ಕಾಶಿಇ/ಸೇವೆ–1/ಸಪ್ರಾನೇ/199/2019–20 ದಿನಾಂಕ 01–09–2021ರ ಅನ್ವಯ ಅರ್ಹ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ. ಸದರಿ ನಿಯಮದ ಅನ್ವಯ ಅಭ್ಯರ್ಥಿಗಳು ಸಹಾಯಕ ಪ್ರಾಧ್ಯಾಪಕರ ಹುದ್ದೆಗಳ ನೇಮಕಾತಿಗೆ ಅರ್ಹತೆ ಪಡೆಯಲು ಕರ್ನಾಟಕ ಪರೀಕ್ಷಾ ಪ್ರಾಧಿಕಾರವು ನಡೆಸುವ ಸ್ಪರ್ಧಾತ್ಮಕ ಪರೀಕ್ಷೆಗೆ ಹಾಜರಾಗಬೇಕು.

1. **ಸಹಾಯಕ ಪ್ರಾಧ್ಯಾಪಕರ ಹುದ್ದೆಗಳ ನೇಮಕಾತಿಯನ್ನು ಈ ಕೆಳಕಂಡ ವಿಷಯಗಳಿಗೆ ನಡೆಸಲಾಗುವುದು.**
   ಕನ್ನಡ, ಇಂಗ್ಲೀಷ್, ಹಿಂದಿ, ಉರ್ದು, ಇತಿಹಾಸ, ಅರ್ಥಶಾಸ್ತ್ರ, ರಾಜ್ಯಶಾಸ್ತ್ರ, ಸಮಾಜ ಶಾಸ್ತ್ರ, ಶಿಕ್ಷಣ ಶಾಸ್ತ್ರ, ಕಾನೂನು, ಸಮಾಜ ಕಾರ್ಯ, ಭೂಗೋಳ ಶಾಸ್ತ್ರ, ಭೂಗರ್ಭ ಶಾಸ್ತ್ರ, ವಾಣಿಜ್ಯ ಶಾಸ್ತ್ರ, ನಿರ್ವಹಣಾ ಶಾಸ್ತ್ರ, ಭೌತಶಾಸ್ತ್ರ, ರಸಾಯನಶಾಸ್ತ್ರ, ಜೈವಿಕ ರಸಾಯನ ಶಾಸ್ತ್ರ, ಗಣಿತಶಾಸ್ತ್ರ, ಸೂಕ್ಷ್ಮ ಜೀವಶಾಸ್ತ್ರ, ಪ್ರಾಣಿಶಾಸ್ತ್ರ, ಸಸ್ಯ ಶಾಸ್ತ್ರ, ಎಲೆಕ್ಟ್ರಾನಿಕ್ಸ್, ಗಣಕವಿಜ್ಞಾನ, ಸಂಖ್ಯಾ ಶಾಸ್ತ್ರ, ಫ್ಯಾಶನ್ ಟೆಕ್ನಾಲಜಿ.
2. **ವೇತನ ಶ್ರೇಣಿ:** ಯುಜಿಸಿ ವೇತನ ಶ್ರೇಣಿ ರೂ. 57700 – 182400
3. **ಪಿಂಚಣಿ ಸೌಲಭ್ಯ:** ಸರ್ಕಾರದ ಆದೇಶ ಸಂಖ್ಯೆ: ಎಫ್‌ಡಿ (ಎಸ್‌ಪಿಎಲ್) 04 ಪಿಇಟಿ 2005, ದಿನಾಂಕ: 31–3–2006 ರಂತೆ.
4. **ವಯೋಮಿತಿ:** ಅರ್ಜಿಗಳನ್ನು ಸ್ವೀಕರಿಸಲು ನಿಗದಿಪಡಿಸಿದ ಕೊನೆಯ ದಿನಾಂಕದಂದು ಕನಿಷ್ಠ 22 ವರ್ಷಗಳು ತುಂಬಿರತಕ್ಕದ್ದು ಹಾಗೂ ಈ ಕೆಳಕಂಡ ಗರಿಷ್ಠ ವಯೋಮಿತಿಯನ್ನು ಮೀರಿರಬಾರದು;
   ಎ) ಸಾಮಾನ್ಯ ಅರ್ಹತೆಯ ಅಭ್ಯರ್ಥಿಗಳಿಗೆ : 40 ವರ್ಷಗಳು,
   ಬಿ) ಪ್ರವರ್ಗ 2ಎ, 2ಬಿ, 3ಎ, 3ಬಿ ಅಭ್ಯರ್ಥಿಗಳಿಗೆ : 43 ವರ್ಷಗಳು,
   ಸಿ) ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡ /ಪ್ರವರ್ಗ–1 ಅಭ್ಯರ್ಥಿಗಳಿಗೆ:45 ವರ್ಷಗಳು, ನೇಮಕಾತಿಯ ಗರಿಷ್ಠ ವಯೋಮಿತಿಯನ್ನು ಈಗಾಗಲೇ ಸರ್ಕಾರಿ ಸೇವೆಯಲ್ಲಿರುವ ಅಭ್ಯರ್ಥಿಗಳು, ಎನ್.ಸಿ.ಸಿ ಪರಿವೀಕ್ಷಕರು, ಗ್ರಾಮ ಸಮೂಹ ಪರಿಶೀಲಕರು, ಜೀತ ಕಾರ್ಮಿಕರು, ಜನಗಣತಿ ಮತ್ತು ವಿಧವೆ ಅಭ್ಯರ್ಥಿಗಳಿಗೆ ಗರಿಷ್ಠ ಐದು ವರ್ಷಗಳ ಸಡಿಲಿಕೆ ನೀಡಲಾಗುವುದು. ವಿಕಲಚೇತನ ಅಭ್ಯರ್ಥಿಗಳಿಗೆ ಕರ್ನಾಟಕ ನಾಗರೀಕ ಸೇವಾ (ಸಾಮಾನ್ಯ ನೇಮಕಾತಿ) ನಿಯಮಗಳು, 1977 ರ ಅಧಿನಿಯಮ (3) ರ ನಿಯಮ 6 ರಲ್ಲಿ ನಿಗದಿಪಡಿಸಿರುವಂತೆ ನಿಗದಿತ ಗರಿಷ್ಠ ವಯೋಮಿತಿಯಲ್ಲಿ ಹತ್ತು ವರ್ಷಗಳ ಸಡಿಲಿಕೆ ನೀಡಲಾಗುವುದು. ಹಾಗು ಮಾಜಿ ಸೈನಿಕ ಅಭ್ಯರ್ಥಿಗಳಿಗೆ ಕೇಂದ್ರ ಸರ್ಕಾರದ ಸಶಸ್ತ್ರ ಪಡೆಯಲ್ಲಿ ಅವರು ಸಲ್ಲಿಸಿದ ಸೇವಾವಧಿಯೊಂದಿಗೆ ಮೂರು ವರ್ಷಗಳನ್ನು ಸೇರಿಸಿ ವಯೋಮಿತಿ ಸಡಿಲಿಕೆ ನೀಡಲಾಗುವುದು.
5. **ಅರ್ಜಿ ಸಲ್ಲಿಸುವ ವಿಧಾನ:**
   ಪ್ರಾಧಿಕಾರದ ವೆಬ್‌ಸೈಟ್ http://kea.kar.nic.in ನಲ್ಲಿ ತೋರಿಸಿರುವ "Assistant Professors Recruitment-2021" ಲಿಂಕ್ ಅನ್ನು ಆಯ್ಕೆ ಮಾಡಿ ಆನ್‌ಲೈನ್ ಮುಖಾಂತರ ಅರ್ಜಿಯನ್ನು ಭರ್ತಿಮಾಡಬೇಕು, ಪೆನ್ ಮತ್ತು ಪೇಪರ್ ಉಪಯೋಗಿಸಿ ಅರ್ಜಿಯನ್ನು ಸಲ್ಲಿಸುವ ವಿಧಾನ ಇರುವುದಿಲ್ಲ.

ಆನ್‌ಲೈನ್ ಮುಖಾಂತರ ಅರ್ಜಿಸಲ್ಲಿಸಲು ಪ್ರಾರಂಭಿಕ ದಿನಾಂಕ	**07.10.2021ರ ಬೆಳಗ್ಗೆ 11.30ರಿಂದ**
ಆನ್‌ಲೈನ್ ಮುಖಾಂತರ ಅರ್ಜಿಸಲ್ಲಿಸಲು ಕೊನೆಯ ದಿನಾಂಕ	**06.11.2021ರ ರಾತ್ರಿ 11.59 ಗಂಟೆಯವರೆಗೆ**
ಇ–ಪೋಸ್ಟ್ ಆಫೀಸ್‌ನಲ್ಲಿ ಶುಲ್ಕವನ್ನು ಪಾವತಿ ಮಾಡಲು ಕೊನೆಯ ದಿನಾಂಕ	**10.11.2021 (ಕಛೇರಿ ವೇಳೆಯಲ್ಲಿ)**
ಸ್ಪರ್ಧಾತ್ಮಕ ಪರೀಕ್ಷೆಯನ್ನು 2021 ರ ಡಿಸೆಂಬರ್ ಮಾಹೆಯ ಮೂರನೆ ಅಥವಾ ನಾಲ್ಕನೇ ವಾರದ ಅವಧಿಯಲ್ಲಿ ನಡೆಸುವ ಸಾಧ್ಯತೆ ಇರುತ್ತದೆ.	
ಸ್ಪರ್ಧಾತ್ಮಕ ಪರೀಕ್ಷೆಗೆ ಪ್ರವೇಶ ಪತ್ರಗಳನ್ನು ಡೌನ್ ಲೋಡ್ ಮಾಡಿಕೊಳ್ಳುವ ದಿನಾಂಕವನ್ನು ನಂತರ ತಿಳಿಸಲಾಗುವುದು	

6. **ಶುಲ್ಕ:**

ವಿವರಗಳು	ಶುಲ್ಕ	
ಸಾಮಾನ್ಯ ಅರ್ಹತೆ ಮತ್ತು ಇತರೆ ಪ್ರವರ್ಗಗಳು (ಪ್ರವರ್ಗ–2ಎ / 2ಬಿ / 3ಎ / 3ಬಿ)	**ರೂ.2,000/–**	**ಹಿಂದಿರುಗಿಸಲಾಗುವುದಿಲ್ಲ**
ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಮತ್ತು ಪ್ರವರ್ಗ–1	**ರೂ.1,000/–**	

ಅಂಗವಿಕಲ ಅಭ್ಯರ್ಥಿಗಳಿಗೆ ಶುಲ್ಕ ವಿನಾಯಿತಿ ಇದೆ. (ಶೇ.40ಕ್ಕಿಂತ ಹೆಚ್ಚು ಅಂಗವಿಕಲತೆ ಹೊಂದಿರುವವರು ಮತ್ತು ಅದಕ್ಕೆ ಸಂಬಂಧಿಸಿದಂತೆ ಜಿಲ್ಲಾ ವೈದ್ಯಾಧಿಕಾರಿಗಳಿಂದ ಪ್ರಮಾಣ ಪತ್ರ ಹೊಂದಿರುವವರು)

ಸೂಚನೆ: ಶುಲ್ಕವನ್ನು ಕಂಪ್ಯೂಟರೈಸ್ಡ್ ಅಂಚೆ ಕಚೇರಿಗಳಲ್ಲಿ ಮಾತ್ರ ಪಾವತಿಸಬೇಕು. ಅಭ್ಯರ್ಥಿಗಳು ಒಂದಕ್ಕಿಂತ ಹೆಚ್ಚಿನ ಹುದ್ದೆಗಳಿಗೆ ಅರ್ಜಿ ಸಲ್ಲಿಸಲು ಇಚ್ಛಿಸಿದ್ದಲ್ಲಿ, ಒಂದೇ ಅರ್ಜಿಯಲ್ಲಿ ಸಲ್ಲಿಸಬೇಕು, ಆದರೆ ಅಂತಹ ಅಭ್ಯರ್ಥಿಗಳು ಪ್ರತಿ ಹುದ್ದೆಗೆ ಪ್ರತ್ಯೇಕವಾಗಿ ಶುಲ್ಕವನ್ನು ಪಾವತಿಸಬೇಕು.

7. **ಒಟ್ಟು ಹುದ್ದೆಗಳು: 1242**

ಕ್ರ.ಸಂ.	ವಿಷಯ	ಹುದ್ದೆಗಳ ವಿವರ								ಒಟ್ಟು ಹುದ್ದೆಗಳು
		ಹಿಂದಿನ 2015 ರ ನೇಮಕಾತಿಯಲ್ಲಿ ಭರ್ತಿ ಯಾಗದೇ ಇದ್ದ ಹುದ್ದೆಗಳು (Carry forward)				ಈ ನೇಮಕಾತಿ ಅಧಿಸೂಚನೆಯ ಹುದ್ದೆಗಳು				
		RPC(NHK)		KK(HK)		RPC(NHK)		KK(HK)		
		TOT	Grp-C	TOT	Grp-C	TOT	Grp-C	TOT	Grp-C	
01	ಕನ್ನಡ	1	0	1	0	85	4	15	1	107
02	ಇಂಗ್ಲೀಷ್	30	1	18	1	31	2	1	0	84
03	ಹಿಂದಿ	0	0	1	0	7	0	2	0	10
04	ಉರ್ದು	3	0	3	0	3	0	0	0	9
05	ಇತಿಹಾಸ	1	0	0	0	89	5	13	1	109
06	ಅರ್ಥಶಾಸ್ತ್ರ	0	1	0	0	102	5	13	1	122
07	ರಾಜ್ಯಶಾಸ್ತ್ರ	2	0	0	0	79	4	12	1	98
08	ಸಮಾಜ ಶಾಸ್ತ್ರ	1	0	0	0	36	2	9	1	49
09	ಶಿಕ್ಷಣ ಶಾಸ್ತ್ರ	0	0	0	0	2	0	0	0	2
10	ಕಾನೂನು	0	0	0	0	15	1	0	1	17
11	ಸಮಾಜ ಕಾರ್ಯ	1	0	0	0	4	0	0	0	5
12	ಭೂಗೋಳ ಶಾಸ್ತ್ರ	0	0	0	0	8	0	0	0	8
13	ಭೂಗರ್ಭ ಶಾಸ್ತ್ರ	0	0	0	0	5	0	0	0	5
14	ವಾಣಿಜ್ಯ ಶಾಸ್ತ್ರ	9	1	17	0	134	7	28	2	198
15	ನಿರ್ವಹಣಾ ಶಾಸ್ತ್ರ	9	0	5	0	0	0	0	1	15
16	ಭೌತಶಾಸ್ತ್ರ	2	0	0	0	56	3	14	1	76
17	ರಸಾಯನಶಾಸ್ತ್ರ	2	0	1	0	66	3	12	1	85
18	ಜೈವಿಕ ರಸಾಯನ ಶಾಸ್ತ್ರ	0	0	0	0	5	0	0	0	5
19	ಗಣಿತಶಾಸ್ತ್ರ	3	0	0	0	49	3	19	1	75
20	ಸೂಕ್ಷ್ಮ ಜೀವಶಾಸ್ತ್ರ	0	0	0	0	5	0	0	0	5
21	ಪ್ರಾಣಿಶಾಸ್ತ್ರ	0	0	0	0	26	1	4	0	31
22	ಸಸ್ಯ ಶಾಸ್ತ್ರ	0	0	0	0	45	2	4	0	51
23	ಎಲೆಕ್ಟ್ರಾನಿಕ್ಸ್	0	0	0	0	4	0	0	0	4
24	ಗಣಕವಿಜ್ಞಾನ	12	0	16	0	33	2	0	0	63
25	ಸಂಖ್ಯಾ ಶಾಸ್ತ್ರ	0	0	0	0	6	0	0	0	6
26	ಫ್ಯಾಶನ್ ಟೆಕ್ನಾಲಜಿ	3	0	0	0	0	0	0	0	3
	ಒಟ್ಟು	**79**	**3**	**62**	**1**	**895**	**44**	**146**	**12**	**1242**

ಪ್ರವರ್ಗವಾರು ಮತ್ತು ವಿಷಯವಾರು ಹುದ್ದೆಗಳ ವಿವರಗಳನ್ನು ಹಾಗೂ ಕರ್ನಾಟಕ ರಾಜ್ಯಪತ್ರದಲ್ಲಿ (ಗೆಜೆಟ್) ಪ್ರಕಟಿಸಲಾಗುವುದು ಹಾಗು ಪ್ರಾಧಿಕಾರದ ವೆಬ್‌ಸೈಟ್ http://kea.kar.nic.in ನಲ್ಲಿಯೂ ಸಹ ಪ್ರಚುರಪಡಿಸಲಾಗುವುದು.

8. **ಶೈಕ್ಷಣಿಕ ಅರ್ಹತೆ:**

ಎ. ಅಭ್ಯರ್ಥಿಯು ಭಾರತೀಯ ವಿಶ್ವವಿದ್ಯಾಲಯದಿಂದ ಸಂಬಂಧಪಟ್ಟ / ಸುಸಂಬಂಧಿತ / ಸಂಬಂಧಿಸಿದ ವಿಷಯದಲ್ಲಿ (ಶ್ರೇಣಿ ನೀಡಿಕೆ ಪದ್ಧತಿಯನ್ನು ಅನುಸರಿಸುವ ಕಡೆಗಳಲ್ಲಿ ಪಾಯಿಂಟ್ ಸ್ಕೇಲ್‌ನಲ್ಲಿ ಅದಕ್ಕೆ ತತ್ಸಮಾನದ ಶ್ರೇಣಿ) ಶೇಕಡಾ ಐವತ್ತೈದು ಅಂಕಗಳೊಂದಿಗೆ ಸ್ನಾತಕೋತ್ತರ ಪದವಿ ಅಥವಾ ಮಾನ್ಯತೆ ಪಡೆದಿರುವ / ಅಂಗೀಕೃತ ವಿದೇಶಿ ವಿಶ್ವವಿದ್ಯಾಲಯದಿಂದ ಪಡೆದ ತತ್ಸಮಾನದ ಪದವಿ ಪಡೆದಿರಬೇಕು (ಪರಿಶಿಷ್ಟ ಜಾತಿ ಅಥವಾ ಪರಿಶಿಷ್ಟ ಪಂಗಡ ಅಥವಾ ಇತರೆ ಹಿಂದುಳಿದ ವರ್ಗಗಳು (ಒಬಿಸಿ) (ಕೆನೆಪದರೇತರ) ಅಥವಾ ಗೊತ್ತುಪಡಿಸಿ ಪ್ರಮಾಣದ ಅಂಗವಿಕಲತೆ ಹೊಂದಿರುವ ವಿಕಲಚೇತನ ವ್ಯಕ್ತಿಗಳ ಹಕ್ಕುಗಳ ಅಧಿನಿಯಮ, 2016 (ಕೇಂದ್ರ ಅಧಿನಿಯಮ ಸಂಖ್ಯೆ 2016ರ 4ಎ) ರಲ್ಲಿ ಪಠ್ಯಾಪಿಸಲಾದ ಅಭ್ಯರ್ಥಿಗಳು ಶೇ. 50%).

ವಿದೇಶದ ಅಂಗೀಕೃತ ವಿಶ್ವವಿದ್ಯಾಲಯಗಳಿಂದ ಪದವಿ / ಸ್ನಾತಕೋತ್ತರ ಪದವಿಯನ್ನು ಪಡೆದಿರುವ ಅಭ್ಯರ್ಥಿಗಳು, ಅಂತಹ ಪದವಿ / ಸ್ನಾತಕೋತ್ತರ ಪದವಿಯ ಹಾಗು ಅವುಗಳ ವಿಷಯಗಳ ಶೈಕ್ಷಣಿಕ ತತ್ಸಮಾನತೆಯ ಬಗ್ಗೆ ಅಸೋಸಿಯೇಷನ್ ಆಫ್ ಇಂಡಿಯನ್ ಯೂನಿವರ್ಸಿಟೀಸ್ ಸಂಸ್ಥೆಯ ವೆಬ್‌ಸೈಟ್ https://www.aiu.ac.in ನಲ್ಲಿ ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸಿ, ತತ್ಸಮಾನ ಪದವಿ ಪ್ರಮಾಣ ಪತ್ರವನ್ನು ಪಡೆದು ನಂತರ ಸಹಾಯಕ ಪ್ರಾಧ್ಯಾಪಕರ ನೇಮಕಾತಿಗೆ ಅರ್ಜಿ ಸಲ್ಲಿಸಬೇಕು.

ಸೆಪ್ಟೆಂಬರ್ 19, 1991ಕ್ಕೆ ಮುಂಚೆ ತನ್ನ ಸ್ನಾತಕೋತ್ತರ ಪದವಿ ಪಡೆದಿರುವ ಪಿ.ಎಚ್‌ಡಿ ಪದವೀಧರರಿಗೆ (ಶೇಕಡಾ ಐವತ್ತೈದರಿಂದ ಶೇಕಡಾ ಐವತ್ತು ಅಂಕಗಳಿಗೆ) ಶೇಕಡಾ ಐದರಷ್ಟು ರಿಯಾಯಿತಿಯನ್ನು ನೀಡಲಾಗುವುದು.

ಸೂಚನೆ: ಶೇಕಡಾ 55 ಅರ್ಹತಾ ಅಂಕಗಳು (ಅಥವಾ ಗ್ರೇಡಿಂಗ್ ಸಿಸ್ಟಂ ಅನುಸರಿಸುತ್ತಿರುವಲ್ಲಿ ತತ್ಸಮಾನ ಗ್ರೇಡ್) ಮತ್ತು ಅರ್ಹತಾ ಅಂಕಗಳಲ್ಲಿ 5% ಸಡಿಲಿಕೆಗೆ ಮೇಲೆ ಸೂಚಿಸಿರುವ ವಿವಿಧ ಕೆಟಗರಿಗಳ ಅಭ್ಯರ್ಥಿಗಳಿಗೆ ಗ್ರೇಸ್ ಅಂಕಗಳನ್ನು ಹೊರತುಪಡಿಸಿದಂತೆ ಅವಕಾಶವಿದೆ. ಸ್ನಾತಕೋತ್ತರ ಮಟ್ಟದ ಪದವಿಯನ್ನು ಕಾನೂನು ರೀತ್ಯ ಸ್ಥಾಪಿಸಲ್ಪಟ್ಟ ವಿಶ್ವವಿದ್ಯಾಲಯದ ಮೂಲಕ ಶ್ರೇಣಿಪದ್ಧತಿ ನೀಡಿಕೆಯನ್ನು ಅನುಸರಿಸುವ ಕಡೆಗಳಲ್ಲಿ ಶೇಕಡಾ ಐವತ್ತೈದಕ್ಕೆ ಸಮನಾಗಿರುವಂತೆ ಸಂಬಂಧಿಸಿದ ಶ್ರೇಣಿಯನ್ನು ಮಾನ್ಯವಾಗಿರುವಂತೆಯೂ ಕೂಡ ಪರಿಗಣಿಸತಕ್ಕದ್ದು.

ಯಾವುದೇ ಕೃಪಾಂಕ ನೀಡಿಕೆ ಪ್ರಕ್ರಿಯೆಗಳನ್ನು ಒಳಗೊಳ್ಳದೆ ಕೇವಲ ಅರ್ಹತಾದಾಯಕ ಅಂಕಗಳನ್ನು ಮಾತ್ರ ಆಧರಿಸಿ ಪರಿಗಣಿಸಲಾಗುವುದು.

ಮತ್ತು

ಬಿ. ಯುಜಿಸಿ ಅಥವಾ ಸಿಎಸ್‌ಐಆರ್ ಮೂಲಕ ನಡೆಸಲಾದ "ರಾಷ್ಟ್ರೀಯ ಅರ್ಹತಾ ಪರೀಕ್ಷೆ"ಯಲ್ಲಿ ಅಥವಾ ಅಂಥ ಯುಜಿಸಿ "ರಾಜ್ಯ ಮಟ್ಟದ ಅರ್ಹತಾ ಪರೀಕ್ಷೆ" ಅಥವಾ "ಕೆಸೆಟ್" ಪರೀಕ್ಷೆಯಲ್ಲಿ ಯಶಸ್ವಿಯಾಗಿ ತೇರ್ಗಡೆಯಾಗಿರತಕ್ಕದ್ದು.

ಸಿ. ವಿಶ್ವವಿದ್ಯಾಲಯ ಧನ ಸಹಾಯ ಆಯೋಗ (ಎಂಫಿಲ್/ಪಿಎಚ್‌ಡಿ ಪದವಿ ನೀಡಿಕೆಗಾಗಿ ಕನಿಷ್ಠ ಮಾನದಂಡಗಳು ಮತ್ತು ಪ್ರಕ್ರಿಯೆ) ವಿನಿಯಮಗಳು, 2009 ಅಥವಾ ವಿಶ್ವವಿದ್ಯಾಲಯ ಧನ ಸಹಾಯ ಆಯೋಗ (ಎಂಫಿಲ್/ಪಿಎಚ್‌ಡಿ ಪದವಿ ನೀಡಿಕೆಗಾಗಿ ಕನಿಷ್ಠ ಮಾನದಂಡಗಳು ಮತ್ತು ಪ್ರಕ್ರಿಯೆ) ವಿನಿಯಮಗಳು, 2016ರ ಮತ್ತು ಸಂದರ್ಭಾನುಸಾರ ತರುವಾಯ ಕಾಲಕಾಲಕ್ಕೆ ಅವುಗಳಿಗೆ ಮಾಡಲಾದ ತಿದ್ದುಪಡಿಗಳಿಗೆ ಅನುಸಾರವಾಗಿ ಪಿಎಚ್‌ಡಿ ಪದವಿಯನ್ನು ಪಡೆದಿರುವಂತಹ ಅಭ್ಯರ್ಥಿಗಳಿಗೆ, ಅಗತ್ಯವಿರುವ ಎನ್‌ಇಟಿ/ಎಸ್ ಎಲ್‌ಇಟಿ/ಎಸ್‌ಇಟಿಯ ಕನಿಷ್ಠ ಅರ್ಹತಾ ಷರತ್ತುಗಳ ಅಗತ್ಯದಿಂದ ವಿನಾಯಿತಿ ನೀಡಲಾಗುವುದು. ಆದರೆ,

ಜುಲೈ 11, 2009ಕ್ಕೆ ಮುಂಚೆ ಎಂಫಿಲ್ ಅಥವಾ ಪಿ.ಎಚ್‌ಡಿ ಪದವಿಗಾಗಿ ನೋಂದಾಯಿಸಿದ ಅಭ್ಯರ್ಥಿಗಳಿಗೆ ಆ ಪದವಿ ನೀಡುವ ಸಂಸ್ಥೆಗಳಲ್ಲಿ ಅಂದು ಜಾರಿಯಲ್ಲಿದ್ದ ಅಧ್ಯಾದೇಶಗಳು/ಉಪ–ವಿಧಿಗಳು/ವಿನಿಯಮಗಳು, ಉಪಬಂಧಗಳಿಗನುಸಾರವಾಗಿ ಪದವಿಯನ್ನು ಪಡೆದಿರತಕ್ಕದ್ದು ಮತ್ತು ಅಂತಹ ಪಿ.ಎಚ್‌ಡಿ ಅಭ್ಯರ್ಥಿಗಳಿಗೆ ಈ ಮುಂದಿನ ಷರತ್ತುಗಳನ್ನು ಪೂರೈಸುವ ಷರತ್ತಿಗೆ ಒಳಪಟ್ಟು ಅಗತ್ಯವಿರುವಂತಹ ಎನ್‌ಇಟಿ/ಎಸ್‌ಎಲ್‌ಇಟಿ/ಎಸ್‌ಇಟಿಯಿಂದ ವಿನಾಯಿತಿ ನೀಡತಕ್ಕದ್ದು.

(ಎ) ಅಭ್ಯರ್ಥಿಯು ಪಿ.ಎಚ್‌ಡಿ ಪದವಿಯನ್ನು ನಿಯಮಿತ (ರೆಗ್ಯುಲರ್) ರೀತಿಯಲ್ಲಿ ಪಡೆದಿರಬೇಕು;
(ಬಿ) ಪಿ.ಎಚ್‌ಡಿ ಪ್ರಬಂಧವು ಕನಿಷ್ಠ ಇಬ್ಬರು ಬಾಹ್ಯ ವಿಷಯ ಪರೀಕ್ಷಕರಿಂದ ಅನುಮೋದಿತವಾಗಿರತಕ್ಕದ್ದು;
(ಸಿ) ಪಿ.ಎಚ್‌ಡಿಗೆ ಸಂಬಂಧಿಸಿದಂತೆ ಮುಕ್ತ ಅಭ್ಯರ್ಥಿಯ ಮೌಖಿಕ ಸಂದರ್ಶನ ನಡೆಸಿರತಕ್ಕದ್ದು;
(ಡಿ) ಅಭ್ಯರ್ಥಿಯು ಆತನ ಪಿ.ಎಚ್‌ಡಿ ವಿಷಯಕ್ಕೆ ಸಂಬಂಧಿಸಿದಂತೆ ಎರಡು ಸಂಶೋಧನಾ ಲೇಖನಗಳನ್ನು ಪ್ರಕಟಿಸತಕ್ಕದ್ದು, ಅದರಲ್ಲಿ ಒಂದು ಲೇಖನ ಪರಾಮರ್ಶನ ಜರ್ನಲ್‌ನಲ್ಲಿ ಪ್ರಕಟವಾಗತಕ್ಕದ್ದು;
(ಇ) ಅಭ್ಯರ್ಥಿಯು ತನ್ನ ಪಿ.ಎಚ್‌ಡಿ ಕಾರ್ಯವನ್ನು ಆಧರಿಸಿ ಕನಿಷ್ಠ ಪಕ್ಷ 2 ಪತ್ರಿಕೆಗಳನ್ನು ಯುಜಿಸಿ ಅಥವಾ ಐಸಿಎಸ್‌ಎಸ್‌ಆರ್ ಅಥವಾ ಸಿಎಸ್‌ಐಆರ್ ಅಥವಾ ಯಾವುದೇ ಅಂತಹುದೇ ಏಜೆನ್ಸಿಯ ಮೂಲಕ ಪ್ರಾಯೋಜಿಸಲಾದ ಅಥವಾ ಧನ ಸಹಾಯ ಮಾಡಲಾದ ಅಥವಾ ಬೆಂಬಲಿಸಿದ ಸಮ್ಮೇಳನಗಳು ಅಥವಾ ವಿಚಾರ ಸಂಕಿರಣಗಳಲ್ಲಿ ಮಂಡಿಸತಕ್ಕದ್ದು.

ಈ ಮೇಲಿನ ಷರತ್ತುಗಳನ್ನು ಪೂರೈಸಿರುವುದರ ಕುರಿತು ಸಂಬಂಧಪಟ್ಟ ವಿಶ್ವವಿದ್ಯಾಲಯದ ರಿಜಿಸ್ಟ್ರಾರ್ ಅಥವಾ ಡೀನ್ (ಶೈಕ್ಷಣಿಕ ವ್ಯವಹಾರಗಳು) ಇವರು ಪ್ರಮಾಣೀಕರಿಸಿರುವ ದಾಖಲೆಗಳನ್ನು ಅರ್ಜಿ ಸಲ್ಲಿಸುವ ಕೊನೆಯ ದಿನಾಂಕದೊಳಗೆ ಪಡೆದಿರಬೇಕು ಮತ್ತು ದಾಖಲಾತಿ ಪರಿಶೀಲನೆಯ ಸಮಯದಲ್ಲಿ ಸಲ್ಲಿಸಬೇಕು.

ಡಿ. ನೇಮಕಾತಿಗಾಗಿ ಅಗತ್ಯವಿರುವ ಎನ್‌ಇಟಿ/ಎಸ್‌ಎಲ್‌ಇಟಿ/ಎಸ್‌ಇಟಿಯಿಂದ ಈ ಕೆಳಗಿನಂತೆ ವಿನಾಯಿತಿ ನೀಡಲಾಗುವುದು.

i. ಕ್ವಾಸಿಕ್ವಾರೆಲ್ಲಿ ಸೈಮಂಡ್ಸ್ (QS);
ii. ದಿ ಟೈಮ್ಸ್ ಹೈಯರ್ ಎಜ್ಯುಕೇಷನ್ (THE) ಅಥವಾ;
iii. ಶಾಂಘೈ ಜಿಯೋ ಟಾಂಗ್ ವಿಶ್ವವಿದ್ಯಾಲಯ (ಶಾಂಘೈ)ದ ಜಾಗತೀಕ ವಿಶ್ವವಿದ್ಯಾಲಯಗಳ ಶೈಕ್ಷಣಿಕ ರ್‍ಯಾಂಕಿಂಗ್ ನಲ್ಲಿ (ಯಾವುದೇ ಸಮಯದಲ್ಲಿ) ಮೊದಲ 500 ರ್‍ಯಾಂಕ್ ನಲ್ಲಿರುವ ವಿದೇಶಿ ವಿಶ್ವವಿದ್ಯಾಲಯಗಳ/ ಸಂಸ್ಥೆಯಿಂದ ಪಿ.ಎಚ್.ಡಿ ಪದವಿಯನ್ನು ಪಡೆದಿದ್ದಲ್ಲಿ.

ಸೂಚನೆ:

1. ಯಾವ ವಿಷಯಗಳಲ್ಲಿ ಯುಜಿಸಿ ಅಥವಾ ಸಿಎಸ್‌ಐಆರ್, ಎನ್‌ಇಟಿ ಪರೀಕ್ಷೆಯನ್ನು ಅಥವಾ ಯುಜಿಸಿಯಿಂದ ಮಾನ್ಯತೆ ಪಡೆದ ಎಸ್‌ಇಟಿ ಅಥವಾ ಕೆಎಸ್‌ಇಟಿ ಪರೀಕ್ಷೆಯನ್ನು ನಡೆಸಲಾಗುವುದಿಲ್ಲವೋ ಅಂಥ ವಿಷಯಗಳಿಗಾಗಿ ಎನ್‌ಇಟಿ ಅಥವಾ ಎಸ್‌ಎಲ್‌ಇಟಿ ಅಥವಾ ಕೆಎಸ್‌ಇಟಿಯನ್ನು ಅಗತ್ಯಪಡಿಸುವುದಿಲ್ಲ.
2. ಸಹಾಯಕ ಪ್ರಾಧ್ಯಾಪಕರ ಹುದ್ದೆಗೆ ಸಂಬಂಧಿಸಿದಂತೆ ವಿಶ್ವವಿದ್ಯಾಲಯ ಧನ ಸಹಾಯ ಆಯೋಗವು ಕಾಲಕಾಲಕ್ಕೆ ಹೊರಡಿಸಲಾದ ವಿನಿಯಮಗಳು ಅಥವಾ ಮಾರ್ಗಸೂಚಿಗಳಲ್ಲಿ ನಿರ್ದಿಷ್ಟಪಡಿಸಿದ ಶೈಕ್ಷಣಿಕ ವಿದ್ಯಾರ್ಹತೆಗಳು ಅನ್ವಯವಾಗುತ್ತದೆ.

9. **ಸ್ಪರ್ಧಾತ್ಮಕ ಪರೀಕ್ಷೆಯ ವಿವರಗಳು:**

ಸ್ಪರ್ಧಾತ್ಮಕ ಪರೀಕ್ಷೆಯನ್ನು, ಬೆಂಗಳೂರು, ಮೈಸೂರು, ಶಿವಮೊಗ್ಗ, ಧಾರವಾಡ, ಬೆಳಗಾವಿ, ಕಲಬುರ್ಗಿ, ಮತ್ತು ಮಂಗಳೂರು ಸ್ಥಳಗಳಲ್ಲಿ ನಡೆಸಲಾಗುವುದು. ಪರೀಕ್ಷೆಗಳ ದಿನಾಂಕಗಳನ್ನು ಅಧಿಸೂಚಿಸಿದಾಗ ಪ್ರವೇಶ ಪತ್ರಗಳನ್ನು ಪ್ರಾಧಿಕಾರದ ಅಂತರ್ಜಾಲದಿಂದ ಅಭ್ಯರ್ಥಿಗಳು ಡೌನ್‌ಲೋಡ್ ಮಾಡಿಕೊಳ್ಳಬೇಕು. ಅಭ್ಯರ್ಥಿಗಳಿಗೆ ಪ್ರವೇಶ ಪತ್ರಗಳನ್ನು ಪ್ರತ್ಯೇಕವಾಗಿ ರವಾನಿಸಲಾಗುವುದಿಲ್ಲ. **ಸ್ಪರ್ಧಾತ್ಮಕ ಪರೀಕ್ಷೆಯನ್ನು 2021 ರ ಡಿಸೆಂಬರ್ ಮಾಹೆಯ ಮೂರನೆ ಅಥವಾ ನಾಲ್ಕನೇ ವಾರದ ಅವಧಿಯಲ್ಲಿ ನಡೆಸುವ ಸಾಧ್ಯತೆ ಇರುತ್ತದೆ. ಸ್ಪರ್ಧಾತ್ಮಕ ಪರೀಕ್ಷಾ ವೇಳಾಪಟ್ಟಿಯನ್ನು ಕೆಇಎ ವೆಬ್‌ಸೈಟ್ http://kea.kar.nic.in ನಲ್ಲಿ ನಂತರ ಪ್ರಕಟಿಸಲಾಗುತ್ತದೆ.**

ವಿವರಗಳು	ಪತ್ರಿಕೆ	ವಿಷಯ	ಅಂಕಗಳು	ಒಟ್ಟು ಪ್ರಶ್ನೆಗಳು	ಅವಧಿ
ಎ. ಕಡ್ಡಾಯ ಪತ್ರಿಕೆ	Paper-I	ಕನ್ನಡ	100	-	2 ಗಂಟೆಗಳು
	Paper-II	ENGLISH	100	-	2 ಗಂಟೆಗಳು
ಬಿ. ಕಡ್ಡಾಯ ಪತ್ರಿಕೆ	Paper-III	ಸಾಮಾನ್ಯ ಜ್ಞಾನ	50	50	2 ಗಂಟೆಗಳು
	Paper-IV	ಐಚ್ಛಿಕ ವಿಷಯ	250	125	3 ಗಂಟೆಗಳು

ಬಿ. ಕಡ್ಡಾಯ ಪತ್ರಿಕೆಯಲ್ಲಿ ಋಣಾತ್ಮಕ ಮೌಲ್ಯಮಾಪನವಿದ್ದು, ಪ್ರತಿ ತಪ್ಪು ಉತ್ತರಗಳಿಗೆ 1/4 ರಷ್ಟು ಅಂಕಗಳನ್ನು ಕಳೆಯಲಾಗುವುದು,ಒಂದು ಅಂಕಕ್ಕೆ 1/4 (0.25) ಅಂಕ, 2 ಅಂಕಕ್ಕೆ 1/2 (0.50) ಅಂಕವನ್ನು ಕಳೆಯಲಾಗುವುದು.

10. ಸಹಾಯಕ ಪ್ರಾಧ್ಯಾಪಕರ ಹುದ್ದೆಗಳಿಗೆ ಸಂಬಂಧಿಸಿದಂತೆ ಆಯಾ ವಿಷಯಗಳಿಗೆ ಅಗತ್ಯ ಅರ್ಹತೆ ವಿವರ, ಸ್ಪರ್ಧಾತ್ಮಕ ಪರೀಕ್ಷೆಯ ವಿಷಯಗಳು, ವಿಷಯಗಳ ವಿವರ ಮತ್ತು ಸಮಾನಾಂತರ ಶಿಕ್ಷಣಾರ್ಹತೆ, ಆಯ್ಕೆ ಪ್ರಕ್ರಿಯೆ ಮತ್ತು ನೇಮಕಾತಿಯ ವಿವರ ಹಾಗೂ ಪ್ರವರ್ಗವಾರು ಮತ್ತು ವಿಷಯವಾರು ಹುದ್ದೆಗಳ ವಿವರಗಳನ್ನು ಕೆಇಎ ವೆಬ್‌ಸೈಟ್ http://kea.kar.nic.in ಗೆ ಭೇಟಿ ನೀಡಲು ಹಾಗೂ ಕರ್ನಾಟಕ ರಾಜ್ಯ ಪತ್ರ (ಗೆಜೆಟ್) ವನ್ನು ನೋಡಲು ಕೋರಿದೆ.

ಗಮನಿಸಿ:

1. ಕೇವಲ ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸುವುದು, ಸ್ಪರ್ಧಾತ್ಮಕ ಪರೀಕ್ಷೆಗೆ ಹಾಜರಾಗುವುದು ಮತ್ತು ಸ್ಪರ್ಧಾತ್ಮಕ ಪರೀಕ್ಷೆಯಲ್ಲಿ ಅರ್ಹತೆ ಪಡೆದ ಮಾತ್ರಕ್ಕೆ ಅಭ್ಯರ್ಥಿಗಳಿಗೆ ಸಹಾಯಕ ಪ್ರಾಧ್ಯಾಪಕರ ನೇಮಕಾತಿಗೆ ಯಾವುದೇ ಹಕ್ಕನ್ನು ನೀಡುವುದಿಲ್ಲ. ನೇಮಕಾತಿಯು ಸರ್ಕಾರವು ನಿಗದಿಪಡಿಸಬಹುದಾದ ಅರ್ಹತಾ ಮಾನದಂಡಗಳಿಗೆ ಒಳಪಟ್ಟಿರುತ್ತದೆ.
2. ಮೇಲಿನ ಯಾವುದೇ ನಿಯಮಗಳು / ಕಾರ್ಯವಿಧಾನಗಳಿಗೆ ಸಂಬಂಧಿಸಿದಂತೆ ವ್ಯತ್ಯಾಸ ಅಥವಾ ಅಸ್ಪಷ್ಟತೆ ಕಂಡು ಬಂದಲ್ಲಿ, ಕರ್ನಾಟಕ ನಾಗರೀಕ ಸೇವೆಗಳು (ಸಾಮಾನ್ಯ ನೇಮಕಾತಿ) ನಿಯಮಗಳು, 1977 (ತಿದ್ದುಪಡಿಗಳು) ರಲ್ಲಿರುವಂತೆ ಅನ್ವಯಿಸುತ್ತದೆ.

ಸಹಿ/–
(ಎಸ್. ರಮ್ಯ, ಭಾ.ಆ.ಸೇ.)
ಕಾರ್ಯನಿರ್ವಾಹಕ ನಿರ್ದೇಶಕರು

ವಾಾಇಸಂಇ/ಬೆಂ.ಸ/1741/2021–22

ಕೋವಿಡ್-19. ಆತಂಕ ಬೇಡ; ಮುನ್ನೆಚ್ಚರಿಕೆ ಇರಲಿ.
ಮಾಸ್ಕ್ ಧರಿಸಿ
6 ಅಡಿ
ದೈಹಿಕ ಅಂತರ ಪಾಲಿಸಿ
ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ